ಕಲಕಅ:82/2016-17 ದಿನಾಂಕ : ೦೯-೧೧-೨೦೧೬

# <u>ಪ್ರಕಟಣೆ</u>

ಚಿತ್ರಕಲಾ ಪ್ರಪಂಚಕ್ಕೆ ಜೀವಮಾನದ ಅಮೂಲ್ಯವಾದ ಸೇವೆಯನ್ನು ಪರಿಗಣಿಸಿ, ಈ ಕೆಳಕಂಡ ೩ ಜನ ಹಿರಿಯ ಕಲಾವಿದರಿಗೆ ಕರ್ನಾಟಕ ಲಲಿತಕಲಾ ಅಕಾಡೆಮಿಯು ೨೦೧೬ನೇ ಸಾಲಿನ ವರ್ಷದ ಗೌರವ ಪ್ರಶಸ್ತಿಯನ್ನು ನೀಡಬೇಕೆಂದು, ಅಕಾಡೆಮಿ ಅಧ್ಯಕ್ಷರದ ಡಾ.ಎಂ.ಎಸ್.ಮೂರ್ತಿ ಅವರ ಅಧ್ಯಕ್ಷತೆಯಲ್ಲಿ ದಿನಾಂಕ : ೨೮/೧೦/೨೦೧೬ರಂದು ನಡೆದ ಸರ್ವಸದಸ್ಯರ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

## ೨೦೧೬ನೇ ಸಾಲಿನ ವಾರ್ಷಿಕ ಗೌರವ ಪ್ರಶಸ್ತಿ ಪುರಸ್ಕೃತರು

1) ಶ್ರೀಮತಿ ಮಾರ್ಥ ಝೂಕಿಮೋವಿಜ್, ಬೆಂಗಳೂರು



ಪೋಲೆಂಡಿನ ವಾರ್ಸಾದಲ್ಲಿ ಜನಿಸಿದ ಶ್ರೀಯುತರು ವಾರ್ಸಾ ವಿಶ್ವವಿದ್ಯಾಲಯದಿಂದ ಎಂ.ಎ. (ಸಂಸ್ಕೃತ, ಸಮಕಾಲೀನ ಭಾರತೀಯ ಭಾಷೆಗಳು, ಮತ್ತು ಕಲೆ ಸಂಸ್ಕೃತಿ) ಪದವಿ ಗಳಿಸಿದರು. ಜೊತೆಯಲ್ಲಿ ಕಲಾ ಇತಿಹಾಸವನ್ನೂ ಅಭ್ಯಾಸ ಮಾಡಿದರು. ಬಳಿಕ ಭಾರತಕ್ಕೆ ಬಂದು ಬೆಂಗಳೂರಿನಲ್ಲಿ ನೆಲೆಸಿದರು. ಮೊದಲಿಗೆ ಭಾರತೀಯ ಸಂಸ್ಕೃತಿ–ಪುರಾಣ, ಕಲೆಗಳಿಗೆ ಸಂಬಂಧಿಸಿದ ಕೆಲವು ಕೃತಿಗಳನ್ನು ಪೋಲಿಷ್ ಭಾಷೆಯಲ್ಲಿ ಬರೆದರು. ಮತ್ತು ಕೆಲವು ಸಂಸ್ಕೃತ ಅನುವಾದಗಳನ್ನೂ ಮಾಡಿದರು. ಅವುಗಳಲ್ಲಿ ಮುಖ್ಯವಾದವು 'ಮೆಟಮಾರ್ಫಾಸಿಸ್ ಆಫ್ ಇಂಡಿಯನ್ ಗಾಡ್ಸ್' ಮತ್ತು 18ನೇ ಶತಮಾನದ ಆಂಧ್ರದ ಚಿತ್ರಕಲೆಯ ಸಂಗ್ರಹದ ಕೃತಿಗಳು.

ಇತ್ತೀಚಿನ ದಿನಗಳಲ್ಲಿ ಇವರು ಬೆಂಗಳೂರು, ದೆಹಲಿ, ಮುಂಬಯಿ ಮುಂತಾದ ಸ್ಥಳಗಳಲ್ಲಿ ಸಮಕಾಲೀನ ಕಲೆಯನ್ನು ಕುರಿತಾದ ಪ್ರದರ್ಶನಗಳ ವಿವಿಧ ಮಜಲುಗಳನ್ನು ನಿರ್ವಹಿಸಿದ್ದಾರೆ. ಅವುಗಳಲ್ಲಿ ಕೆಲವೆಂದರೆ 'ಆನ್ ದಿ ಎಡ್ಜ್ ಆಫ್ ವಾಲ್ಯೂಮ್', 'ಐಕನೋಗ್ರಫಿ ಇನ್ ಟ್ರಾನ್ಸಿಯಂಟ್ ಟೈಮ್ಸ್', ಟುವರ್ಡ್ಸ್ ಅಬ್‌ಸ್ಟ್ರಾಕ್ಷನ್', 'ದಿ ಇನ್ವರ್ಟೆಡ್ ಟ್ರೀ'.

## 2) ಶ್ರೀ ಬಾಬುರಾವ್.ವಿ.ನಡೋಣಿ, ಬೆಳಗಾವಿ



ಶ್ರೀಯುತರು 1963ರಲ್ಲಿ ಬೆಳಗಾವಿ ಜಿಲ್ಲೆಯ ಅಥಣಿಯಲ್ಲಿ ಜನಿಸಿದರು. ದಾವಣಗೆರೆಯ ಫೈನ್ ಆರ್ಟ್ಸ್ ಕಾಲೇಜಿನಿಂದ ಕಲಾ ಪದವಿ, ಹಾಗೂ ಕನ್ನಡ ವಿಶ್ವವಿದ್ಯಾಲಯದಿಂದ ಮಾಸ್ಟರ್ ಆಫ್ ವಿಷುಯಲ್ ಆರ್ಟ್ಸ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಪ್ರಸ್ತುತ ರಾಯಭಾಗದ ವಿವೇಕಾನಂದ ಕಾಲೇಜ್ ಆರ್ಫ್ ಫೈನ್ಸ್ ಆರ್ಟ್ಸ್‌ನಲ್ಲಿ ಹಿರಿಯ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಪಟ್ಟದಕಲ್ಲು, ಮೈಸೂರು, ದೆಹಲಿ, ಧಾರವಾಡ, ವಿಜಯಪುರ, ಹಾಸನ, ಹಂಪಿ, ಬೆಳಗಾವಿ ಮುಂತಾದ ನಗರಗಳಲ್ಲಿ ನಡೆದ ಕಲಾಶಿಬಿರಗಳಲ್ಲಿ ಶ್ರೀಯುತರು ಪಾಲ್ಗೊಂಡಿದ್ದಾರೆ. ಬೆಂಗಳೂರು, ಧಾರವಾಡ, ಪುಣೆ, ಕಲಬುರಗಿ, ಮಂಗಳೂರು, ಚೆನ್ನೈ, ಮುಂಬಯಿ, ದೆಹಲಿ, ಚಂಡೀಗಢ ಮುಂತಾದ ಊರುಗಳಲ್ಲಿ ಇವರ ಕಲಾಪ್ರದರ್ಶನಗಳು ನಡೆದು ಸಹೃದಯರ ಮೆಚ್ಚುಗೆ ಪಡೆದಿವೆ. ಭಾವಚಿತ್ರಕಾರರಾಗಿ ಹೆಸರಾಗಿರುವ ಶ್ರೀಯುತರಿಗೆ ಕರ್ನಾಟಕ ಲಲಿತಕಲಾ ಅಕಾಡೆಮಿ, ಮೈಸೂರು ದಸರಾ, ನಾಗಪುರದ ದಕ್ಷಿಣ ಮಧ್ಯ ವಲಯ ಸಾಂಸ್ಕೃತಿಕ ಸಂಸ್ಥೆ ಮುಂತಾದವುಗಳ ಪ್ರಶಸ್ತಿಗಳು ಹಾಗೂ ಡಾ. ಅಂಬೇಡ್ಕರ್ ಫೆಲೋಶಿಪ್ ದೊರಕಿವೆ. ನಾಡಿನ ಅನೇಕ ಪ್ರತಿಷ್ಠಿತ ಸಂಘ, ಸಂಸ್ಥೆಗಳ ಸಲಹೆಗಾರರಾಗಿಯೂ ಶ್ರೀಯುತರು ಸೇವೆ ಸಲ್ಲಿಸುತ್ತಿದ್ದಾರೆ.

## 3) ಶ್ರೀ ಕೆ.ಕೆ.ಮಕಾಳಿ, ಬಳ್ಳಾರಿ



1961ರಲ್ಲಿ ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲ್ಲೂಕಿನಲ್ಲಿ ಜನಿಸಿದ ಇವರು ಎಂ.ಎ. ಆರ್ಟ್ ಮಾಸ್ಟರ್ ಪದವಿಯನ್ನು ಪಡೆದು ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ವಿನ್ಯಾಸಕರ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಕಲಾವಿದರಾಗಿ ನವನಾಡು, ಮುಂಗಾರು, ಸಂಕ್ರಮಣ, ಸುದ್ದಿಸಂಗಾತಿ ಮುಂತಾದ ನಿಯತಕಾಲಿಕಗಳಲ್ಲಿ ಕಲಾವಿದರಾಗಿ ಸೇವೆ ಸಲ್ಲಿಸಿದ್ದು, ಸುಧಾ, ಮಯೂರ, ಪ್ರಜಾವಾಣಿ ಪತ್ರಿಕೆಗಳಲ್ಲಿ ಫ್ರೀಲ್ಯಾನ್ಸರ್ ಆಗಿ ಕೆಲ ಕಾಲ ದುಡಿಮೆ. ಕನ್ನಡ, ಹಿಂದಿ, ಇಂಗ್ಲೀಷ್ ಭಾಷೆಗಳ ವಿವಿಧ ರೀತಿಯ ಸಾವಿರಾರು ಪುಸ್ತಕಗಳ ಮುಖಪುಟ ವಿನ್ಯಾಸಕರಾಗಿ ನಾಡಿನಾದ್ಯಂತ ಜನಪ್ರಿಯ. ನವಕರ್ನಾಟಕ ಪ್ರಕಾಶನ ಹೊರತಂದ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಪುಸ್ತಕಗಳಿಗೆ ಭಾವಚಿತ್ರಗಳ ರಚನೆ.

ಕರ್ನಾಟಕ ಲಲಿತಕಲಾ ಅಕಾಡೆಮಿಯ ಸದಸ್ಯರೂ ಆಗಿದ್ದ ಶ್ರೀಯುತರು ಅಕಾಡೆಮಿಯ 2015ನೇ ಸಾಲಿನ ಫೆಲೋಶಿಪ್ ಗೌರವ ಪಡೆದಿದ್ದಾರೆ. ದೇಶದ ನಾನಾ ನಗರಗಳಲ್ಲಿ ಮಾತ್ರವಲ್ಲದೆ ಅಮೆರಿಕಾ, ಸ್ವೀಡನ್, ನಾರ್ವೆ, ಜಪಾನ್ ಮುಂತಾದೆಡೆಗಳಲ್ಲಿ ಇವರ ಕಲಾಕೃತಿಗಳು ಸಂಗ್ರಹವಾಗಿವೆ.

**ಡಾ. ಎಂ.ಎಸ್. ಮೂರ್ತಿ**
**ಅಧ್ಯಕ್ಷರು**
**ಕರ್ನಾಟಕ ಲಲಿತಕಲಾ ಅಕಾಡೆಮಿ**